ಇದು ನನ್ನ ಚೈತನ್ಯದ ಅವಿಭಾಜ್ಯ ಅಂಗ. ಅದು ನನಗೆ ಗೊತ್ತು. ನನ್ನ ಮತ್ತು ಈ ಭಾವನೆಗಳ ನಡುವೆ ಅಂತರವನ್ನು ಕಾಯ್ದುಕೊಳ್ಳುತ್ತೇನೆ. ಈ ಭಾವನೆಗಳು ಕೆಟ್ಟದ್ದು ಅಂತ ಗೊತ್ತು. ಆದ್ದರಿಂದಲೇ ಅದನ್ನು ದೂರತಳ್ಳುತ್ತೇನೆ. ನಾನು ಹೊಟ್ಟೆಕಿಚ್ಚಿಗೆ ಬಲಿಯಾದೆ ಅಂತ ಹೇಳುತ್ತಿಲ್ಲ. ಆದರೆ, ಈ ಅಂಶ ಯಾವಾಗಲೂ ನನ್ನನ್ನು ಕಾಡುತ್ತದೆ. ಕೊನೆಗೆ ಅದು ನನ್ನ ಕತೆಗಳ ವಸ್ತುವಾಗಿಬಿಡುತ್ತದೆ. 'ದ ವೈಟ್ ಕ್ಯಾಸ್ಟಲ್'ನ ಎರಡು ಪ್ರಮುಖ ಪಾತ್ರಗಳು ನನ್ನ ಮತ್ತು ನನ್ನಣ್ಣನ ಸಂಬಂಧವನ್ನು ಆಧರಿಸಿವೆ.

ಮತ್ತೊಂದೆಡೆ ಒಬ್ಬರು ಮತ್ತೊಬ್ಬರಾಗುವ ಈ ವಸ್ತುವನ್ನು ಟರ್ಕಿ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಮುಖಾಮುಖಿಯಲ್ಲಿ ಸೂಕ್ಷ್ಮವಾಗಿ ಕಾಣಬಹುದು. 'ದ ವೈಟ್ ಕ್ಯಾಸ್ಟಲ್' ಬರೆದ ಮೇಲೆ ಈ ಅಸೂಯೆ – ಒಂದು ಮತ್ತೊಂದರಿಂದ ಪ್ರಭಾವಿತವಾಗಿಬಿಡುವ ಆತಂಕ ಪಾಶ್ಚಾತ್ಯದತ್ತ ನೋಡುತ್ತಿರುವ ಟರ್ಕಿಯ ಸ್ಥಿತಿಯನ್ನು ಹೋಲುತ್ತದೆ ಎಂದು ಅರಿವಾಯಿತು. ಮೊದಲು ಪಾಶ್ಚಾತ್ಯೀಕರಣವಾಗಬೇಕು ಅಂದುಕೊಳ್ಳುವುದು ಮತ್ತೆ ಹಾಗೆ ಮಾಡುವುದು ಸರಿಯಲ್ಲ ಅಂದುಕೊಳ್ಳುವುದು... ಯುರೋಪಿನ ಚೈತನ್ಯವನ್ನು ತುಂಬಿಕೊಳ್ಳಬೇಕೆಂದುಕೊಳ್ಳುವುದು ಅನಂತರ ಅನುಕರಣೆಗೆ ಒಳಗಾದೆನಲ್ಲ ಅಂತ ತಪ್ಪಿತಸ್ಥ ಮನೋಭಾವದಲ್ಲಿ ಒದ್ದಾಡುವುದು. ಈ ಮೇಲಾಟ ಜಗ್ಗಾಟಗಳು ಪ್ರತಿಸ್ಪರ್ಧಿಗಳಂತಿರುವ ಅಣ್ಣತಮ್ಮಂದಿರ ಸಂಬಂಧದಲ್ಲಿ ಇರುತ್ತವೆ.

◆ **'ಇಸ್ತಾಂಬುಲ್'ನಲ್ಲಿ ನಗರವನ್ನು ಬಹಳ ರೊಮ್ಯಾಂಟಿಸೈಸ್ ಮಾಡಿದಂತೆ ಅನ್ನಿಸುತ್ತದೆ. ಕಳೆದುಹೋದ ಒಟ್ಟೊಮನ್ ಸಾಮ್ರಾಜ್ಯದ ಕುರಿತು ನೀವು ಹಳಹಳಿಸಿದಂತೆ ಅನ್ನಿಸುತ್ತದೆ.**

ಹಾಗೇನಿಲ್ಲ. ಪಾಶ್ಚಾತ್ಯೀಕರಣಕ್ಕೆ ಒಳಗಾಗಿದ್ದು ಸಂತೋಷದ ವಿಷಯ. ನಾನೂ ಪಾಶ್ಚಾತ್ಯೀಕರಣಕ್ಕೆ ಒಳಗಾದವನು. ಆಳುವವರು ಮತ್ತು ಶ್ರೀಮಂತ ವರ್ಗದವರು ಈ ಪಾಶ್ಚಾತ್ಯೀಕರಣವನ್ನು ಸೀಮಿತಗೊಳಿಸಿದ್ದರ ಕುರಿತು ಟೀಕಿಸಿದ್ದೇನೆ. ಅವರಿಗೆ ತಮ್ಮದೇ ಆದ ಸಂಕೇತಗಳು, ಸಂಪ್ರದಾಯಗಳನ್ನು ಹೊಂದಿದ ಶ್ರೀಮಂತ ರಾಷ್ಟ್ರೀಯ ಸಂಸ್ಕೃತಿಯನ್ನು ಕಟ್ಟುವುದಕ್ಕೆ ಬೇಕಾಗಿದ್ದ ಆತ್ಮವಿಶ್ವಾಸದ ಕೊರತೆಯಿತ್ತು. ಪೌರಾತ್ಯ ಪಾಶ್ಚಾತ್ಯ ಎರಡನ್ನೂ ಒಳಗೊಂಡ ಸುಭದ್ರವಾದ ಇಸ್ತಾಂಬುಲ್‌ನ ಸಂಸ್ಕೃತಿಯನ್ನು ಕಟ್ಟುವಲ್ಲಿ ಸೋತರು. ಅವರು ಕೇವಲ ಎರಡೂ ಸಂಸ್ಕೃತಿಗಳ ವಿಷಯಗಳನ್ನು ಒಟ್ಟಿಗೆ ಇಟ್ಟರು. ಇಲ್ಲಿ ಬಹಳ ಸುಭದ್ರವಾದ ಒಟ್ಟೋಮನ್ ಸಂಸ್ಕೃತಿ ಇತ್ತು. ಆದರೆ, ಆ ವೇಳೆಗಾಗಲೇ ಅದು ಮಸುಕಾಗತೊಡಗಿತ್ತು. ಸ್ಥಳೀಯ ಸಂಸ್ಕೃತಿಯೊಂದನ್ನು ಹೊಸದಾಗಿ ಹುಡುಕಿಕೊಳ್ಳಬೇಕಿತ್ತು. ಅದು ಪೂರ್ವದ ಹಿಂದಿನ ಕಾಲವನ್ನು, ಪಶ್ಚಿಮದ ಇಂದಿನ ಕಾಲವನ್ನು ಒಳಗೊಂಡಿರಬೇಕಿತ್ತು. ಆದರೆ, ಅನುಕರಣೆಯ ರೀತಿಯಲ್ಲಿ ಅಲ್ಲ. ಅವರು ಇದನ್ನು ಮಾಡಲಿಲ್ಲ. ಇದನ್ನೇ ನನ್ನ ಪುಸ್ತಕಗಳಲ್ಲಿ ಮಾಡಲು ಪ್ರಯತ್ನಿಸಿದ್ದೇನೆ. ಬಹುಶಃ ಹೊಸ ತಲೆಮಾರಿನವರು ಇದನ್ನು ಮಾಡುತ್ತಾರೆ. ಯುರೋಪಿಯನ್ ಒಕ್ಕೂಟವನ್ನು ಸೇರುವುದರಿಂದ ಟರ್ಕಿಯ ಅಸ್ತಿತ್ವಕ್ಕೇನೂ ಧಕ್ಕೆಯಾಗುವುದಿಲ್ಲ. ಬದಲಿಗೆ, ಅದು ಇನ್ನಷ್ಟು ಅರಳಿ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಆತ್ಮವಿಶ್ವಾಸದೊಂದಿಗೆ ಹೊಸ ಟರ್ಕಿಶ್ ಸಂಸ್ಕೃತಿಯನ್ನು ಕಂಡುಕೊಳ್ಳುವಂತೆ ಮಾಡುತ್ತದೆ. ಗುಲಾಮರಂತೆ ಪಶ್ಚಿಮವನ್ನು ಅನುಕರಿಸುವುದಾಗಲಿ ಇಲ್ಲವೇ ಸತ್ತ ಪುರಾತನ ಒಟ್ಟೊಮನ್ ಸಂಸ್ಕೃತಿಯನ್ನು ಅನುಕರಿಸುವುದಾಗಲಿ ಇದಕ್ಕೆ ಪರಿಹಾರವಲ್ಲ. ಇವೆರೆಡರನ್ನೂ ಇಟ್ಟುಕೊಂಡೇ ಏನಾದರೂ ಮಾಡಬೇಕು. ನಾವು ಯಾವುದೋ ಒಂದಕ್ಕೆ ಮಾತ್ರ ಸೇರಿದವರು ಎನ್ನುವ ಆತಂಕವನ್ನು ಇಟ್ಟುಕೊಳ್ಳಬಾರದು.

◆ **'ಇಸ್ತಾಂಬುಲ್'ನಲ್ಲಿ ನಗರವನ್ನು ಪಾಶ್ಚಾತ್ಯ ದೃಷ್ಟಿಕೋನದಿಂದಲೇ ನೋಡಿದ್ದೀರಿ ಅನ್ನಿಸುತ್ತದೆ. ಪಾಶ್ಚಾತ್ಯೀಕರಣಕ್ಕೆ ಒಳಗಾದ ಟರ್ಕಿಶ್ ಬುದ್ಧಿಜೀವಿ ಆ ದೃಷ್ಟಿಕೋನದಿಂದಲೇ ಏಕೆ ನೋಡುತ್ತಾನೆ**